ಆಫೀಸು ನಂದಗೋಕುಲವಾಗಿ ಹೋಯ್ತು.

ಯಾವುದೇ ಅನುಮಾನವಿಲ್ಲದೆ ಶೇಕಡಾ ತೊಂಬತ್ತೈದು ಮತಗಳನ್ನು ಗಳಿಸಿದ ವೆಂಕಯ್ಯ, ಅತ್ಯುತ್ತಮ ಧಿರಿಸಿನ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡ. ತನ್ನ ಕೊಡಲಿ, ಕುರಿಗಳು, ಕೊಳಲಿನ ಸಮೇತ ವೇದಿಕೆಗೆ ಬಂದು ಬಹುಮಾನವನ್ನು ತೆಗೆದುಕೊಂಡ. ಜೊತೆಗೆ ಆ ಬಹುಮಾನದ ಹಣವನ್ನು ಸಹೋದ್ಯೋಗಿಗಳಿಗೆಲ್ಲಾ ಸೊಗಸಾದ ಪಾರ್ಟಿ ಕೊಡಿಸುವುದಕ್ಕೆ ಬಳಸುವುದಾಗಿಯೂ, ಆ ಮೂರು ಕುರಿಗಳನ್ನು ಕಡಿಸಿ ಬಾಡೂಟ ಹಾಕಿಸುವುದಾಗಿಯೂ ಘೋಷಿಸಿದ. ಇಡೀ ಕಂಪೆನಿಯ ಉದ್ಯೋಗಿಗಳೆಲ್ಲಾ "ಸೂಪರ್..." ಎಂದು ಕೂಗಿ ತಮ್ಮ ಸಹಮತವನ್ನು ಕೊಟ್ಟರು. ಆ ಕೂಗಿನ ಆರ್ಭಟಕ್ಕೆ ಬೆಚ್ಚಿದ ಕುರಿಗಳು "ಮ್ಯಾ..." ಎಂದು ಕಿರುಚಿದವು.

ಈ ಎಥ್ನಿಕ್ ಡೇ ಸಹವಾಸವೇ ಬೇಡ ಎಂದು ನಾನು ನೂರು ಬಾರಿಯಾದರೂ ಪಶ್ಚಾತ್ತಾಪ ಪಟ್ಟೆ. ಕಂಪೆನಿಯ ನಿಯಮಗಳನ್ನು ಇನ್ನಷ್ಟು ಗಟ್ಟಿ ಮಾಡಬೇಕು ಎಂದು ನಿರ್ಧರಿಸಿದೆ.

★★★

ಎಲ್ಲಾ ತೆಲುಗು ಹುಡುಗರಂತೆ ವೆಂಕಯ್ಯನಿಗೂ ವಿದೇಶಕ್ಕೆ ಹೋಗಿ ಬರುವ ಆಸೆಯಿತ್ತು. ಈ ಬಯಕೆ ಇಡೀ ತೆಲುಗು ಜನರ ಸಂಸ್ಕೃತಿಯಲ್ಲಿ ಸಾಂಕ್ರಾಮಿಕವಾಗಿ ಹಬ್ಬಿದೆ. ವಿದೇಶಕ್ಕೆ ಹೋಗಿ ಬಂದರೆ ಹೆಣ್ಣಿನ ತಂದೆಯಿಂದ ಹೆಚ್ಚು ಪೀಕಿಸಬಹುದು ಎನ್ನುವ ತರ್ಕ ಇದರ ಹಿಂದಿದೆ. ಆದರೆ ಈ ತರ್ಕ ಹಿನ್ನೆಲೆಗೆ ಸರಿದು, ವಿದೇಶ ಪ್ರಯಾಣವು ವ್ಯಕ್ತಿಯ ಹಿರಿಮೆಯ ಪ್ರತೀಕ ಎನ್ನುವ ರೀತಿಯ ಸಮರ್ಥನೆಗಳೂ ನಡೆಯುತ್ತವೆ. ವಿದೇಶಕ್ಕೆ ತೆಲುಗು ಹುಡುಗಿ ಹೋಗಿ ಬಂದರೆ, ಅವಳ ವರದಕ್ಷಿಣೆಯನ್ನು ಸ್ವಲ್ಪ ಮಟ್ಟಿಗೆ ಅವಳೇ ಸಂಪಾದಿಸಬಹುದು ಎನ್ನುವ ಕಾರಣದಿಂದ ಹುಡುಗಿಯರೂ ವಿದೇಶ ಪ್ರಯಾಣಕ್ಕೆ ದುಂಬಾಲು ಬೀಳುತ್ತಾರೆ.

ನಾನು ಇಂಗ್ಲೆಂಡ್ ದೇಶದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದೆ. ಯಾರನ್ನೇ ಆ ದೇಶಕ್ಕೆ ಕಳುಹಿಸಬೇಕೆಂದರೂ ನಾನೇ ಅಂತಿಮ ಅಪ್ಪಣೆಯನ್ನು ಕೊಡಬೇಕಾಗಿತ್ತು. ಆ ಕಾರಣಕ್ಕಾಗಿಯೇ ಬಹುತೇಕ ಉದ್ಯೋಗಿಗಳು ನನ್ನ ಸುತ್ತಮುತ್ತ ದುಂಬಿಯಂತೆ ಸುತ್ತುತ್ತಿದ್ದರು. ನನ್ನನ್ನು ಅನಾವಶ್ಯಕವಾಗಿ ಹೊಗಳುವುದು, ಏನಾದರೂ ಉಡುಗೊರೆ ತಂದುಕೊಡುವುದು, ನನ್ನ ಪ್ರಾಜೆಕ್ಟ್‌ಗಳಲ್ಲಿ ವಿಶೇಷ ಆಸಕ್ತಿ ತೋರಿಸುವುದು ಇತ್ಯಾದಿಗಳನ್ನು ಮಾಡುತ್ತಿದ್ದರು. ವೆಂಕಯ್ಯನೂ ಇದಕ್ಕೆ ಹೊರತಾಗಿರಲಿಲ್ಲ. "ಹೇಗಾದ್ರೂ ವಿದೇಶಕ್ಕೆ ಕಳುಹಿಸಿ ಬಿಡಿ. ಡೌರಿಯಲ್ಲಿ ಒಂದೈದು ಪರ್ಸೆಂಟ್ ಕೊಡ್ತೀನಿ" ಎಂದು ನೇರವಾಗಿಯೇ ಹೇಳಿ ನನ್ನಿಂದ ಬೈಸಿಕೊಂಡಿದ್ದ.

ವೆಂಕಯ್ಯ ತಾಂತ್ರಿಕವಾಗಿ ಜಾಣ. ಯಾವುದೇ ಕೆಲಸ ಕೊಟ್ಟರೂ ಅಚ್ಚುಕಟ್ಟಾಗಿ ಮಾಡುತ್ತಿದ್ದ. ಆದರೆ ಅವನ ಇಂಗ್ಲಿಷ್ ಭಾಷೆ – ಬರಹ ಎಲ್ಲವೂ ಕೆಟ್ಟದ್ದಾಗಿತ್ತು. ಒಂದು ಸರಿಯಾದ ಇ–ಮೇಲ್ ಬರೆಯುವುದಕ್ಕೂ ಒದ್ದಾಡುತ್ತಿದ್ದ. ಯಾವುದಾದರೂ ಕೋಚಿಂಗ್ ಕ್ಲಾಸ್ ಸೇರಿಕೊಂಡು ಇಂಗ್ಲಿಷ್ ಕಲಿತುಕೋ ಎಂದರೆ ಅಂತಹ ಆಸಕ್ತಿ ತೋರಿಸುತ್ತಿರಲಿಲ್ಲ. "ಅಲ್ಲಿಯ ಪ್ರಾಜೆಕ್ಟ್ ಮ್ಯಾನೇಜರ್ ಹೇಗೂ ತೆಲುಗು ಅಥವಾ ಕನ್ನಡದವನು ಆಗಿರ್ತಾನೆ. ಅವನ ಜೊತೆ ಅವನದೇ ಭಾಷೆಯಲ್ಲಿ ಮಾತಾಡ್ತೀನಿ. ಕ್ಲಯಿಂಟ್ಸ್ ವ್ಯವಹಾರವನ್ನ ಅವನು ಇಂಗ್ಲಿಷ್‌ನಲ್ಲಿ ನೋಡಿಕೊಳ್ತಾನೆ. ನೀನ್ಯಾಕೆ ಚಿಂತೆ ಮಾಡ್ತೀಯ?" ಎಂದು ನನಗೇ ಉಪದೇಶ ಮಾಡಲಾರಂಭಿಸಿದ.

ಕೊನೆಗೆ ಒಂದು ಪ್ರಾಜೆಕ್ಟ್‌ಗೆ ಅವನನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟೆ.